ಓ.ಎಸ್.ನಂ.**267/2019**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **11.04.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಕೆ.ಎಂ. ವಕೀಲರಿಂದ

ಗೌರಮ್ಮನವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಹಕ್ಕು ಇತ್ತಾ ಎಂದರೆ ಹೌದು. ನಾನು ವಕೀಲನೆಂದರೆ ಹೌದು. ಸೆಕ್ಷನ್ **54** ಟಿ.ಪಿ. ಆಕ್ಟ್ ಪ್ರಕಾರ ಹಕ್ಕು ಇದ್ದವರು ಮಾತ್ರ ಆಸ್ತಿಯನ್ನು ಮಾರಾಟ ಮಾಡಬೇಕು ಎಂದರೆ ಹೌದು. ಸಾಕ್ಷಿಯು ಮುಂದುವರೆದು ಗೌರಮ್ಮ ಕೋಂ ಕೃಷ್ಣಪ್ಪನವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಹಕ್ಕು ಇತ್ತು, ಆದ್ದರಿಂದ ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನಮ್ಮ ಕ್ರಯಪತ್ರದಲ್ಲಿ ನಿವೇಶನದ ಸಂಖ್ಯೆಯನ್ನು **26** ಎಂದು ನಮೂದಿಸಲಾಗಿದೆ. ಯಾವ ಆಧಾರದ ಮೇಲೆ ನಿವೇಶನ ಸಂಖ್ಯೆಃ**26** ಎಂದು ನಮೂದಿಸಲಾಗಿದೆ ಎಂದರೆ ಪ್ರತಿವಾದಿ ನಂ.**1** ರವರ ತಂದೆ ದಿನಾಂಕಃ**16.03.1989** ರಲ್ಲಿ ದಾವಾ ಸ್ವತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಸದರಿ ಸ್ವತ್ತು ಪುರಸಭಾ ವ್ಯಾಪ್ತಿಯಲ್ಲಿ ಖಾತೆಯಾಗಿ ನಿವೇಶನ ಸಂಖ್ಯೆಃ**26** ಎಂದು ನಮೂದಾಗಿರುತ್ತದೆ ಮತ್ತು ಅದೇ ದಿವಸ ನನ್ನ ದಾವಾ ಸ್ವತ್ತಿನ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಇರುವ ನಿವೇಶನಗಳನ್ನು ಮಾರಾಟ ಮಾಡುವಾಗ ಅವುಗಳಿಗೂ ಕೂಡ ನಿವೇಶನದ ಸಂಖ್ಯೆಯನ್ನು ನೀಡಲಾಗಿರುತ್ತದೆ ಎಂದು ಹೇಳುತ್ತಾರೆ. ಲೇ ಔಟ್ ಪ್ಲ್ಯಾನ್ ಇದೆಯಾ ಎಂದರೆ ಗೊತ್ತಿಲ್ಲ. ನಾನು ಬರೆಸಿಕೊಂಡಿರುವ ಖಾತಾ ನಂ.**1302/1/4813** ಎಎಸ್ **26** ಇರುತ್ತದೆ. ನಾನು ಖರೀದಿ ಮಾಡುವಾಗ ಮಾರಾಟಗಾರರ ಕಡೆಯಿಂದ ಲೇಔಟ್ ಪ್ಲ್ಯಾನ್ ನನ್ನು ಪಡೆದುಕೊಂಡಿಲ್ಲ. ಗೌರಮ್ಮನವರು ಸಿದ್ದಪ್ಪನ ಕಡೆಯಿಂದ ಲೇಔಟ್ ಪ್ಲ್ಯಾನ್ ನನ್ನು ಪಡೆದುಕೊಂಡಿದ್ದಾರಾ ಎಂದರೆ ಗೊತ್ತಿಲ್ಲ. ಅದೇ ರೀತಿ ಸಿದ್ದಪ್ಪನವರು ತಿಮ್ಮಯ್ಯನ ಕಡೆಯವರಿಂದ ಖರೀದಿ ಮಾಡುವಾಗ ಲೇಔಟ್ ಪ್ಲ್ಯಾನ್ ನನ್ನು

ಪಡೆದುಕೊಂಡಿದ್ದರಾ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ಸರ್ವೆ ನಂ.11 ರಲ್ಲಿ ಬರುತ್ತದೆ. ಸರ್ವೆ ನಂ.11 ರಲ್ಲಿ ಒಟ್ಟು 27 ಗುಂಟೆಯಿದೆ. ಸದರಿ ಆಸ್ತಿಯು ತಿಮ್ಮಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದಿದೆ ಎಂದು ತಿಳಿಸಿರುತ್ತಾರೆ. ತಿಮ್ಮಯ್ಯನವರಿಗೆ ಮೂಲತಃ ದಾವಾ ಆಸ್ತಿಯು ಮಂಜೂರಾಗಿರುತ್ತದೆ ಹಾಗೂ 2009 ರಲ್ಲಿ ಅವರ ಸ್ವಯಾರ್ಜಿತ ಆಸ್ತಿ ಎಂದು ವಿಭಾಗ ಪತ್ರದಲ್ಲಿ ನಮೂದು ಮಾಡಿದ್ದಾರೆ. ನನ್ನ ಪ್ರಕಾರ ದಾವಾ ಆಸ್ತಿಯು ಮಂಜೂರಾದ ನಂತರ ನಗರಸಭಾ ವ್ಯಾಪ್ತಿಗೆ ಸೇರಿ ಖಾತೆಯಾಗಿರುತ್ತದೆ. ತಿಮ್ಮಯ್ಯನವರಿಗೆ ಮಂಜೂರಾದ ಮಂಜೂರಾತಿ ಪತ್ರವನ್ನು ಪಡೆದುಕೊಂಡಿದ್ದೀರಾ ಎಂದರೆ ಹೌದು. ಭೂ ನ್ಯಾಯಾ ಮಂಡಳಿಯಿಂದ ಮಂಜೂರಾದ ಆಸ್ತಿಯನ್ನು 15 ವರ್ಷಗಳ ಕಾಲ ಮಾರಾಟ ಮಾಡಬಾರದೆಂದು ಷರತ್ತು ಎಂದರೆ ಹೌದು. ಸಾಕ್ಷಿಯು ಮುಂದುವರೆದು ಸದರಿ ಮಂಜೂರಾದ ಆಸ್ತಿಯು 1989 ರಲ್ಲಿ ನಗರಸಭಾ ವ್ಯಾಪ್ತಿಗೆ ಸೇರಿ ಅನ್ಯಕ್ರಾಂತ ವಾಗಿರುವ ಕಾರಣ ಭೂ ಮಂಜೂರಾತಿ ಕಾಯ್ದೆ ಅನ್ವಯಿಸುವುದಿಲ್ಲ ಎಂದು ಹೇಳುತ್ತಾರೆ. 1989 ರಲ್ಲಿ ನಗರಸಭೆಯವರು ದಾವಾ ಆಸ್ತಿಯನ್ನು ಅವರ ವ್ಯಾಪ್ತಿಗೆ ಪಡೆದುಕೊಂಡ ನಂತರ ಭೂ ಪರಿವರ್ತನೆಯ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ತಿಮ್ಮಯ್ಯನವರ ಒಪ್ಪಿ ಗೆಯ ಮೇರೆಗೆ ದಾವಾ ಆಸ್ತಿಯನ್ನು ನಗರಸಭಾ ವ್ಯಾಪ್ತಿಗೆ ಸೇರಿಸಿಕೊಂಡಿದ್ದಾರೆ. ಭೂ ಪರಿವರ್ತನೆ ಯಾರು ಮಾಡಿಸಿದ್ದಾರೆ ಎಂದರೆ ಸಾಕ್ಷಿಯು ನಗರಸಭಾ ವ್ಯಾಪ್ತಿಗೆ ಸೇರಿಸಿಕೊಂಡ ನಂತರ ಭೂ ಪರಿವರ್ತನೆ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ದಾವಾ ಆಸ್ತಿಯ ಹಳೆ ಖಾತಾ ಉತಾರ್ ನ್ನು ತೋರಿಸಿದಾಗ ಸದರಿ ಆಸ್ತಿಯ ಖಾತೆಯು ಗೌರಮ್ಮ ಕೋಂ ಕೃಷ್ಣಪ್ಪನವರ ಹೆಸರಿನಲ್ಲಿ ಖಾತೆ ಬರುತ್ತಿದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ 30 ಇಂಟು 20 ನಿವೇಶನ ಕಲ್ಲು ಮಾಳಿಗೆ ಕಟ್ಟಡ ಕಟ್ಟಿರುತ್ತಾರೆ ಹಾಗೂ ಸದರಿ ಆಸ್ತಿಯು ಸುಲೋಚನಾ ಬಿನ್ ವೈ.ಎನ್.ರಾಮಚಂದ್ರರಾವ್ ಹಾಗೂ ತಿಮ್ಮಯ್ಯ ಬಿನ್ ವೆಂಕಟಪ್ಪ ಎಂದು ನಮೂದಾಗಿದೆ ಎಂದರೆ ಅದಕ್ಕೂ ದಾವಾ ಆಸ್ತಿಗೂ ಸಂಬಂಧವಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ತೆಗೆದುಕೊಂಡಿದ್ದೀರಾ ಎಂದರೆ ಇಲ್ಲ. ಸದರಿ ಖಾತಾ

ನಂ.**1302/4813** ಆಸ್ತಿಯು ನಿಮಗೆ ಸಂಬಂಧಿಸಿದ್ದಲ್ಲವಾ? ಎಂದರೆ ಹೌದು ನನಗೆ ಸಂಬಂಧಿಸಿದ್ದು, ಗೌರಮ್ಮನ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ನಸದೊ/ಮಾ.ಹ./ಸಿ.ಆರ್./**99/2019-20,** ದಿನಾಂಕಃ **26.08.2019** ರ ದಾಖಲೆಯನ್ನು ಸಾಕ್ಷಿಗೆ ತೋರಿಸಿದಾಗ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ದಿನಾಂಕಃ**16.03.1989** ರ ಕ್ರಯಪತ್ರದಲ್ಲಿ ಸರ್ವೆ ನಂಬರ್ ನಮೂದಿಸಿದ್ದಾರಾ ಎಂದರೆ ಇಲ್ಲ. ಸಿದ್ದಪ್ಪನವರು ಖರೀದಿಸಿದ ಕ್ರಯಪತ್ರದಲ್ಲಿ ಸದರಿ ಆಸ್ತಿಯ ಖಾತೆ ಸಂಖ್ಯೆಃ **1478/4813** ವಿಎಸ್. **26** ಎಂದು ನಮೂದಿಸಲಾಗಿದೆ. ಸದರಿ ಕ್ರಯಪತ್ರದಲ್ಲಿ ನಿವೇಶನ ಸಂಖ್ಯೆಃ**26** ಎಂದು ಬರೆದಿದ್ದಾರಾ ಎಂದರೆ ಹೌದು. ಸದರಿ ಕ್ರಯಪತ್ರದಲ್ಲಿ **4813/4908/26** ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಸದರಿ **26** ಸಂಖ್ಯೆಯೇ ನಿವೇಶನದ ಸಂಖ್ಯೆ ಎಂದು ಹೇಳುತ್ತಾರೆ. ತಿಮ್ಮಯ್ಯನ ಹೆಸರಿನಲ್ಲಿರುವ ಖಾತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ತಿಮ್ಮಯ್ಯನವರು ಆಸ್ತಿಗೆ ಕಂದಾಯ ಕಟ್ಟಿದ್ದಾರಾ ಎಂದರೆ ಹೌದು, ಕಂದಾಯ ಕಟ್ಟಿ ನಗರಸಭೆಗೆ ಸೇರಿಸಿದ್ದಾರೆ ಎಂದು ಹೇಳುತ್ತಾರೆ. ತಿಮ್ಮಯ್ಯನವರು ದಾವಾ ಆಸ್ತಿಯನ್ನು ನಗರಸಭೆಗೆ ಸೇರಿಸಿದ ಬಗ್ಗೆ ಹಾಗೂ ಅದಕ್ಕೆ ತೆರಿಗೆ ಕಟ್ಟಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ನಾನು ಇದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ**07.01.1994** ರಂದು ದಾವಾ ಆಸ್ತಿಯನ್ನು ತಿಮ್ಮಯ್ಯನವರು ನಗರಸಭೆಗೆ ಸೇರಿಸಿದ್ದಾರೆ ಎಂದರೆ ಗೊತ್ತಿಲ್ಲ. ತಿಮ್ಮಯ್ಯನವರು **27** ನಿವೇಶನಗಳನ್ನಾಗಿ ಮಾಡಿ ನಗರಸಭೆಗೆ ರೂ. **37,890/-** ಗಳನ್ನು ಅಭಿವೃದ್ಧಿ ತೆರಿಗೆ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಣವನ್ನು ದಿನಾಂಕಃ**23.11.1993** ರಲ್ಲಿ ಕಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನಗರಸಭೆಯವರು ದಿನಾಂಕಃ**11.01.1988** ರಲ್ಲಿ **11/1**ಎ ಮತ್ತು ಸಿ ರಲ್ಲಿ **32** ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿಸಿಕೊಳ್ಳಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದು ಎನ್.ಓ.ಸಿ. ನೀಡಿದ್ದಾರೆ ಎಂದರೆ ಗೊತ್ತಿಲ್ಲ. ಅದೇ ಸಮಯದಲ್ಲಿ **27** ನಿವೇಶನಗಳನ್ನಾಗಿ ಮಾಡಲು ನಗರಸಭೆಯವರು ಅನುಮತಿ ನೀಡಿ

ಅಂಗೀಕರಿಸಿದ್ದಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂ.11/1ಎ ಮತ್ತು ಸಿ ರಲ್ಲಿ ಒಟ್ಟು 32 ನಿವೇಶನಗಳನ್ನು ದಿನಾಂಕ:06.01.1992 ರಲ್ಲಿ ವ್ಯವಸಾಯೇತರ ಅನುಕೂಲಕ್ಕಾಗಿ ಪರಿವರ್ತನೆ ಮಾಡಿ ಆದೇಶಿಸಲಾಗಿದೆ ಎಂದರೆ ಗೊತ್ತಿಲ್ಲ. 1992 ರವರೆಗೂ ದಾವಾ ಆಸ್ತಿಯು ನಗರಸಭೆಯ ವ್ಯಾಪ್ತಿಗೆ ಸೇರಿರಲಿಲ್ಲ ಎಂದರೆ ಸರಿಯಲ್ಲ. ರೆವಿನ್ಯೂ ಜಮೀನನ್ನು ಮುನಿಸಿಪಾಲಿಟಿ ವ್ಯಾಪ್ತಿಗೆ ಸೇರಿಸುವಾಗ ಅಭಿವೃದ್ದಿ ತೆರಿಗೆಯನ್ನು ಕಟ್ಟಿಸಿಕೊಳ್ಳುತ್ತಾರೆ ಎಂದರೆ ಸರಿ. ಸರ್ವೆ ನಂ.11/1ಎ ಮತ್ತು ಸಿ ಜಮೀನಿಗೆ ಸಂಬಂಧಿಸಿದಂತೆ ನಗರಸಭೆ ವ್ಯಾಪ್ತಿಗೆ ಸೇರಿಸುವಾಗ ಕಟ್ಟಿಸಿಕೊಂಡ ಅಭಿವೃದ್ಧಿ ತೆರಿಗೆ ಪಾವತಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಆದರೆ ದಾವಾ ಆಸ್ತಿಗೆ ಅಭಿವೃದ್ಧಿ ತೆರಿಗೆ ಪಾವತಿಸಿದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

2ನೇ ಪ್ರತಿವಾದಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ಇ-ಖಾತೆಯನ್ನು ಅವರ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನಾನು 2017 ರಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಇ-ಖಾತಾ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಿದಾಗ 2ನೇ ಪ್ರತಿವಾದಿಯ ಹೆಸರಿಗೆ ಇ-ಖಾತಾ ಆಗಿರುವ ಬಗ್ಗೆ ತಿಳಿಯಿತು ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು 2ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಇ-ಖಾತಾ ಸರಿ ಇಲ್ಲ ಎಂದು ಈಗಾಗಲೇ ನಗರಸಭೆಯವರು ಹಿಂಬರಹ ನೀಡಿರುತ್ತಾರೆ ಎಂದು ಹೇಳುತ್ತಾರೆ. ದಿನಾಂಕ:21.06.1984 ರಲ್ಲಿ 32 ಗುಂಟೆ ಜಮೀನನ್ನು ಭೂ ನ್ಯಾಯ ಮಂಡಳಿಯವರು ತಿಮ್ಮಯ್ಯನವರ ಹೆಸರಿಗೆ ಮಂಜೂರು ಮಾಡಿದ್ದಾರೆ ಎಂದರೆ ಇರಬಹುದು. ಮಂಜೂರಾದ ನಂತರ 1984 ರಿಂದ 15 ವರ್ಷಗಳ ತನಕ ಪರಭಾರೆ ಮಾಡಬಾರದೆಂಬ ಷರತ್ತು ಇದೆ ಎಂದರೆ ಸರಿ. ಆ ಅವಧಿಯಲ್ಲಿ ಯಾವುದಾದರೂ ಕ್ರಯದ ವ್ಯವಹಾರವಾದರೆ ಸದರಿ ಕ್ರಯಪತ್ರವು ಅಸಿಂಧುವಾಗುತ್ತದೆ ಎಂದರೆ ಸಾಕ್ಷಿಯು ಈಗಾಗಲೇ ದಾವಾ ಆಸ್ತಿಯು ಭೂ ಪರಿವರ್ತನೆಯಾಗಿ ನಗರಸಭೆಗೆ ಸೇರಿರುವ ಕಾರಣ ಸದರಿ ಷರತ್ತು ದಾವಾ ಆಸ್ತಿಯ ಕ್ರಯಪತ್ರಕ್ಕೆ ಅನ್ವಯಿಸುವುದಿಲ್ಲವೆಂದು ಹೇಳುತ್ತಾರೆ. ಸದರಿ ಆಸ್ತಿಯು ಭೂ ಪರಿವರ್ತನೆಯಾಗಿರುವ ಬಗ್ಗೆ ದಾಖಲೆಯನ್ನು

ಹಾಜರುಪಡಿಸಿದ್ದೀರಾ ಎಂದರೆ ಹೌದು. ಕಲಂ **61 (3)** ಕಾಯ್ದೆಯ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡ ನಾನು ದಾವಾ ಆಸ್ತಿಯನ್ನು ಖರೀದಿಸಿದ್ದೇನೆ ಎಂದರೆ ಸಾಕ್ಷಿಯು ಮಾಹಿತಿ ಇದೆ ಆದರೆ ದಾವಾ ಆಸ್ತಿಯು ನಗರಸಭಾ ವ್ಯಾಪ್ತಿಗೆ ಸೇರಿದ ಕಾರಣ ಖರೀದಿಸಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು **38** ವರ್ಷಗಳಾದರೂ ಯಾವುದೇ ಕ್ರಯಪತ್ರಗಳನ್ನು ಕಲಂ **61 (3)** ಕಾಯ್ದೆಯಡಿಯಲ್ಲಿ ಪ್ರಶ್ನಿಸಿಲ್ಲ ಎಂದು ಉತ್ತರಿಸುತ್ತಾರೆ. ನಗರಸಭೆ ಖಾತೆಯ ಆಧಾರದ ಮೇಲೆ ನಾನು ದಾವಾ ಆಸ್ತಿಯ ಖಾತೆಯ ಹಕ್ಕನ್ನು ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಕೇವಲ ನಾನು ನಗಸಭೆ ದಾಖಲೆಯ ಆಧಾರದ ಮೇಲೆ ಹಕ್ಕನ್ನು ಕೇಳುತ್ತಿಲ್ಲ, ಆದರೆ ನೋಂದಾಯಿತ ಕ್ರಯಪತ್ರಗಳ ಆಧಾರದ ಮೇಲೆ ಹಕ್ಕನ್ನು ಕೇಳುತ್ತಿದ್ದೇನೆ ಎಂದು ಹೇಳುತ್ತಾರೆ.

ದಾವಾ ಸ್ವತ್ತನ್ನು ದಿನಾಂಕ:**16.03.1989** ರ ಪೂರ್ವದಲ್ಲೇ ನಗರಸಭೆ ವ್ಯಾಪ್ತಿಗೆ ಸೇರಿಸಲಾಗಿತ್ತು. ಆ ಕಾಲಕ್ಕೆ ಯಾರು ಮಾಲೀಕರು ಇದ್ದರೋ ಅವರು ಸೇರಿಸಿರುತ್ತಾರೆ. ಆ ಸಮಯದಲ್ಲಿ ತಿಮ್ಮಯ್ಯನವರು ಮಾಲೀಕರಾಗಿದ್ದರು. ಸದರಿ ದಾಖಲೆಯನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಿನಾಂಕ:**16.03.1989** ರಲ್ಲಿ ದಾವಾ ಆಸ್ತಿಯ ಖಾತೆಯು ತಿಮ್ಮಯ್ಯನವರ ಹೆಸರಿನಲ್ಲಿ ಇತ್ತು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸರ್ವೆ ನಂ.**11/1**ಎ ಮತ್ತು **1**ಸಿ ರಲ್ಲಿ ದಾವಾ ಆಸ್ತಿಯು ಎಲ್ಲಿ ಬರುತ್ತದೆ ಎಂದು ಹೇಳಲು ಆಗುತ್ತದೆಯಾ ಎಂದರೆ ಹೌದು. ಪೂರ್ವಕ್ಕೆ – ರಸ್ತೆ, ಪಶ್ಚಿಮಕ್ಕೆ – ಕಾರ್ಮಲ್ ಜ್ಯೋತಿ ಶಾಲೆಯ ಸ್ವತ್ತು, ಉತ್ತರಕ್ಕೆ – ತರಹುಣಸೆ ಸಿದ್ದಪ್ಪನವರ ಮನೆ ಸ್ವತ್ತು ಮತ್ತು ದಕ್ಷಿಣಕ್ಕೆ – ಲಕ್ಷ್ಮಮ್ಮನವರ ಮನೆಯ ಸ್ವತ್ತು. ದಿನಾಂಕ:**16.03.1989** ಕ್ರಯಪತ್ರದಲ್ಲಿ ತಿಮ್ಮಯ್ಯನವರು ಹೇಳಿ ಬರೆಸಿದ ಹಾಗೂ ನಗರಸಭೆಯಲ್ಲಿ ಅವರೇ ಹೇಳಿ ಬರೆಸಿದ ದಾಖಲೆಯ ಆಧಾರದ ಮೇಲೆ ದಾವಾ ಆಸ್ತಿಯ ಚಕ್ಕುಬಂಧಿಯನ್ನು ಹೇಳುತ್ತಿದ್ದೇನೆ. ದಾವಾ ಆಸ್ತಿಯನ್ನು ತಾಲ್ಲೂಕು ಸರ್ವೆಯರ್ ಕಡೆಯಿಂದ ಸರ್ವೆ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ ಅದರ ಅಕ್ಕ–ಪಕ್ಕದಲ್ಲಿ ಇರುವ ನಿವೇಶನಗಳು ಮಾರಾಟವಾಗಿದ್ದು ಯಾವುದೇ

ಒತ್ತುವರಿಯಾಗಿಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ:**16.03.1989** ರಲ್ಲಿ ಸರ್ವೆ ನಂ.**11/1** ಎ ಮತ್ತು ಸಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ನಿವೇಶನಗಳನ್ನು ಮಾಡಿಲ್ಲ ಹಾಗೂ ಸಿದ್ದಪ್ಪನಿಗೆ ಯಾವುದೇ ನಿವೇಶನವನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವ ಖಾತೆ ನಂ.**1302/4813** ರ ಆಸ್ತಿಯು ತಿಮ್ಮಯ್ಯ ಬಿನ್ ವೆಂಕಟಪ್ಪನವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಹಾಗಾಗಿ ನಾನು ತಿಮ್ಮಯ್ಯ ಬಿನ್ ವೀರಕ್ಯಾತಯ್ಯನವರ ಆಸ್ತಿಯನ್ನು ನಾನು ಯಾವತ್ತಿಗೂ ಕೂಡ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು **2**ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಇ-ಖಾತೆಯನ್ನು ನಗರಸಭೆಯಲ್ಲಿ ಪ್ರಶಿಸಿದ್ದೇನೆ ಎಂದರೆ ಸರಿಯಲ್ಲ. ಆದರೆ ನನ್ನ ಹೆಸರಿಗೆ ಇ-ಖಾತೆ ಮಾಡಲು ಅರ್ಜಿ ಕೊಟ್ಟಿರುತ್ತೇನೆ. ಆ ಸಮಯದಲ್ಲಿ **2**ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಇ-ಖಾತೆ ಸರಿಯಿಲ್ಲ ಎಂದು ನಿ.ಪಿ.**21** ರ ಪ್ರಕಾರ ಹಿಂಬರಹ ನೀಡಿರುತ್ತಾರೆ. **2**ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಖಾತೆಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಇಲ್ಲ. ಕಾರಣ ನಿ.ಪಿ.**22** ರ ಪ್ರಕಾರ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣವನ್ನು ಬಗೆಹರಿಸಿಕೊಳ್ಳಿ ಎಂದು ಹಿಂಬರಹವನ್ನು ನೀಡಿರುತ್ತಾರೆಂದು ಉತ್ತರಿಸುತ್ತಾರೆ. **1984** ರಲ್ಲಿ ದಾವಾ ಆಸ್ತಿಯು ತಿಮ್ಮಯ್ಯನವರಿಗೆ ಮಂಜೂರಾಗಿದ್ದ ಕಾರಣ ಅವರಿಗೆ **1989** ರಲ್ಲಿ ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ತಿಮ್ಮಯ್ಯನಿಂದ ಖರೀದಿ ಮಾಡಿದ ಸಿದ್ದಪ್ಪನಿಗೆ **1994** ರಲ್ಲಿ ಅದನ್ನು ಗೌರಮ್ಮನವರಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ:**21.11.2014** ರಂದು ದಾವಾ ಆಸ್ತಿಯನ್ನು ಮಾರಾಟ ಮಾಡಲು ಗೌರಮ್ಮನವರಿಗೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ, ಅದೇ ರೀತಿ ಸದರಿ ಕ್ರಯಪತ್ರದ ಆಧಾರದ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಬರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ:**06.01.1992** ರ ಭೂ ಪರಿವರ್ತನೆ ಆದೇಶದ ಪ್ರತಿಯನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸೃಷ್ಟಿ ಮಾಡಿದ ದಾಖಲಾತಿಗಳು ಎಂದು ನಾನು ಪ್ರಶ್ನಿಸಿರುವ ಕಾರಣ ಸದರಿ ದಾಖಲೆಯನ್ನು ನ್ಯಾಯಾಲಯದಲ್ಲಿ

ಹಾಜರುಪಡಿಸಿದ್ದೇನೆ. ದಾವಾ ಆಸ್ತಿಯು ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿ ಎಂದು ತಿಳಿದಿದ್ದರೂ ಕೂಡ ನಾನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಸ್ವತ್ತು ಭೂ ಸುಧಾರಣಾ ಕಾಯ್ದೆ ವ್ಯಾಪ್ತಿಗೆ ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಈ ಬಗ್ಗೆ ದಾವಾ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ. ಕಾರಣ ಅದರ ಅವಶ್ಯಕತೆ ಇರಲಿಲ್ಲ. ದಾವಾ ಆಸ್ತಿಯನ್ನು ನಗರಸಭೆ ವ್ಯಾಪ್ತಿಗೆ ಸೇರಿಸಲಾಗಿತ್ತು ಹಾಗೂ ಕಲಂ **61 (3)** ಭೂ ಸುಧಾರಣೆ ಕಾಯ್ದೆ ಅನ್ವಯಿಸುವುದಿಲ್ಲ ಎಂದು ನಾನು ಸೃಷ್ಟಿಸಿರುವ ಕಥೆ ಎಂದರೆ ಸರಿಯಲ್ಲ. ತಿಮ್ಮಯ್ಯನವರು ಮೃತಪಟ್ಟ ನಂತರ ದಿನಾಂಕ:**30.04.2009** ರಲ್ಲಿ ಅವರ ಮಕ್ಕಳ ನಡುವೆ ವಿಭಾಗವಾಗಿದೆ ಎಂದರೆ ಸಾಕ್ಷಿಯು ಸದರಿ ವಿಭಾಗ ಪತ್ರವನ್ನು ಸೃಷ್ಟಿ ಮಾಡಲಾಗಿದೆ ಎಂದು ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ ಎಂದು ಹೇಳುತ್ತಾರೆ. ತಿಮ್ಮಯ್ಯನವರಿಗೆ ಎಷ್ಟು ಜನ ವಾರಸ್ಸುದಾರರಿದ್ದಾರೆ ಎಂದರೆ ಗೊತ್ತಿಲ್ಲ. ವಿಭಾಗ ಪತ್ರವನ್ನು ನೋಡಿದ ನಂತರ ತಿಳಿಯಿತು. ದಿನಾಂಕ:**21.11.2014, 21.02.1994, 16.03.1989** ರ ಕ್ರಯಪತ್ರಗಳು ಅಸಿಂಧು ದಾಖಲೆಗಳು ಎಂದರೆ ಸರಿಯಲ್ಲ. ದಿನಾಂಕ:**16.03.1989** ರ ಕ್ರಯಪತ್ರದಲ್ಲಿ ಪಿತ್ರಾರ್ಜಿತ ಆಸ್ತಿಯೆಂದು ನಮೂದಿಸಿದ ಕಾರಣ ಅದು ನೋಂದಣಿಯಾಗಿದೆ, ಒಂದು ವೇಳೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿ ಎಂದು ನಮೂದಿಸಿದ್ದರೆ ಅದು ನೋಂದಣಿಯಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ಸದರಿ ಆಸ್ತಿಯು ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿ ಎಂದು ನಮೂದಿಸಿದ್ದಾರಾ ಎಂದರೆ ಇಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಬೆಳಿಗ್ಗೆಯ ಕಲಾಪವು ಮುಕ್ತಾಯವಾದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.

ಸಾಕ್ಷಿಯನ್ನು ಪುನಃ ದಿನಾಂಕಃ 11.04.2025 ರ ಮಧ್ಯಾಹ್ನ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಕೆ.ಎಂ. ವಕೀಲರಿಂದ

ನಾನು ತಿಮ್ಮಯ್ಯನ ಹೆಸರಿಗೆ ಆಗಿರುವ ಎಲ್.ಆರ್.ಎಫ್ ಆದೇಶವನ್ನು ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿಯು ಅದರ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ. **1984** ರಲ್ಲಿ ತಿಮ್ಮಯ್ಯನವರಿಗೆ ಕೇವಲ ವ್ಯವಸಾಯಕ್ಕಾಗಿ ಗೇಣಿ ಹಕ್ಕನ್ನು ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ಆದರೆ ಅವರ ಹೆಸರಿಗೆ ಮಂಜೂರಾಗಿರುತ್ತದೆ. **15** ವರ್ಷದ ತನಕ ಸರ್ಕಾರವೇ ಮಾಲೀಕರಾಗಿರುತ್ತದೆ ಎಂದರೆ ಸರಿಯಲ್ಲ. **15** ವರ್ಷದ ಒಳಗೆ ಸದರಿ ಮಂಜೂರಾದ ಜಮೀನನ್ನು ಮಾರಾಟ ಮಾಡಿದರೆ ಕಲಂ **77** ರ ಪ್ರಕಾರ ಸರ್ಕಾರವು ವಶಪಡಿಸಿಕೊಳ್ಳುತ್ತದೆ ಎಂದರೆ ಇರಬಹುದು. ಸಾಕ್ಷಿಯು ಮುಂದುವರೆದು **1989** ರಲ್ಲಿ ದಾವಾ ಆಸ್ತಿಯು ಭೂ ಸುಧಾರಣಾ ಕಾಯ್ದೆಗೆ ಒಳಪಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ದಿನಾಂಕಃ**16.03.1989** ರಲ್ಲಿ ತಿಮ್ಮಯ್ಯನವರು ಗೇಣಿದಾರರೇ ಹೊರತು ಸಂಪೂರ್ಣ ಮಾಲೀಕರಾಗಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ **16.03.1989** ರ ಕ್ರಯಪತ್ರವನ್ನು ರೆವಿನ್ಯೂ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೀರಾ ಎಂದರೆ ಅಗತ್ಯ ಇರಲಿಲ್ಲ. ಸಾಮಾನ್ಯವಾಗಿ ಯಾವುದೇ ರೆವಿನ್ಯೂ ಜಮೀನನ್ನು ಭೂ ಪರಿವರ್ತನೆ ಮಾಡಿಸಲು ಹಕ್ಕಿನ ದಾಖಲೆ, ಮ್ಯೂಟೇಷನ್, ಪಹಣಿ, ಸರ್ವೆ ಸ್ಕೆಚ್, ಜೋನಿಂಗ್ ಸರ್ಟಿಫಿಕೇಟ್, ಅನುಮತಿ ಪತ್ರ, ಎನ್.ಓ.ಸಿ. ದಾಖಲೆಗಳನ್ನು ಕೊಟ್ಟರೆ ಮಾತ್ರ ಭೂ ಪರಿವರ್ತನೆ ಆಗುತ್ತದೆ ಎಂದರೆ ಸರಿ. ಸದರಿ ದಾಖಲೆಗಳನ್ನು ಪರಿಶೀಲಿಸಿ ಪುರಸಭೆ ವ್ಯಾಪ್ತಿಗೆ ಸೇರಿಸಿಕೊಂಡು ನಂತರ ಭೂ ಪರಿವರ್ತನೆ ಆಗಿರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದಕ್ಕೆ ಸಂಬಂಧಿಸಿದ ದಾಖಲಾತಿಗಳು

ನಗರಸಭೆಯಲ್ಲಿ ಇರಬಹುದು ಗೊತ್ತಿಲ್ಲ. ಭೂ ಪರಿವರ್ತನೆಗೆ ಸಂಬಂಧಿಸಿದ ದಾಖಲಾತಿಗಳನ್ನು ಪುರಸಭೆಯಿಂದ ಪಡೆದುಕೊಂಡಿದ್ದೀರಾ ಎಂದರೆ ನಾನು ಪ್ರಾಮಾಣಿಕ ಖರೀದಿದಾರನಾಗಿ ಅಗತ್ಯವಿರುವ ದಾಖಲಾತಿಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈ ರೀತಿ ಭೂ ಪರಿವರ್ತನೆಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ನಗರಸಭೆಯಲ್ಲಿ ಇಲ್ಲದೇ ಇರುವ ಕಾರಣ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಭೂ ಪರಿವರ್ತನೆ ಆದೇಶವಿಲ್ಲದೇ ನಗರಸಭೆಯು ಖಾತೆ ಮಾಡಿದ್ದಲ್ಲಿ ಅವರಿಗೆ ಕಾನೂನಿನಡಿಯಲ್ಲಿ ಶಿಕ್ಷೆಯಾಗುತ್ತದೆ ಎಂದರೆ ಸಾಕ್ಷಿಯು ನಗರಸಭಾ ಆಯುಕ್ತರು ಸಕ್ಷಮ ಅಧಿಕಾರಿಯಾಗಿದ್ದು ಅವರೇ ಅದಕ್ಕೆ ಉತ್ತರ ಕೊಡಬೇಕು ಎಂದು ಹೇಳುತ್ತಾರೆ. ನಾನು ನಗರಸಭೆಯಲ್ಲಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಎಲ್ಲಾ ದಾಖಲಾತಿಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ:**21.11.2014** ರ ಕ್ರಯಪತ್ರವು ಅಸಿಂಧುವಾಗಿದ್ದು**,** ಅದರಡಿ ನನಗೆ ಯಾವುದೇ ಹಕ್ಕು ಮಾಲೀಕತ್ವ ಬರುವುದಿಲ್ಲ ಎಂದರೆ ಸರಿಯಲ್ಲ. ಅಸಿಂಧು ದಾಖಲಾತಿಗಳನ್ನು ರದ್ದುಗೊಳಿಸುವ ಅಗತ್ಯ ಇಲ್ಲ ಎಂದರೆ ಸಾಕ್ಷಿಯು ಸದರಿ ಮೂರು ಕ್ರಯಪತ್ರಗಳನ್ನು ಪ್ರಶ್ನಿಸುವ ಅಧಿಕಾರ ಪ್ರತಿವಾದಿಗಳಿಗೆ ಇಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ:**30.04.2009** ರಲ್ಲಿ ಆದ ವಿಭಾಗ ಪತ್ರದಲ್ಲಿ **1**ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಸೇರಿಸಿ **7** ನಿವೇಶನಗಳು ಬಂದಿವೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳು ಸೃಷ್ಟಿತ ದಾಖಲಾತಿಯಾಗಿರುತ್ತದೆ. ದಾವಾ ತಿಮ್ಮಯ್ಯ ಬಿನ್ ವೀರಕ್ಯಾತಯ್ಯನವರಿಗೆ ಸೇರಿದ್ದು**,** ನಾನು ಹಾಜರುಪಡಿಸಿದ ದಾಖಲಾತಿಗಳು ತಿಮ್ಮಯ್ಯ ಬಿನ್ ವೆಂಕಟಪ್ಪನವರಿಗೆ ಸೇರಿದ ದಾಖಲಾತಿಗಳು ಎಂದರೆ ಸರಿಯಲ್ಲ. ತಿಮ್ಮಯ್ಯ ಬಿನ್ ವೀರಕ್ಯಾತಯ್ಯನವರಿಗೆ ಸೇರಿದ ಸರ್ವೆ ನಂ.**11/1**ಎ ಮತ್ತು ಸಿ ಜಮೀನಿಗೆ ಸೇರಿದ ಯಾವುದೇ ಆಸ್ತಿಯನ್ನು ಪರಭಾರೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು **1**ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದ್ದು**,** ಅವರು **2**ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಅವರೇ ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು

ಹೊಡೆದು ಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.